# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ


**ಸುಭಾಷಿತ:**

ಶಾಂತಿ ನೆಮ್ಮದಿ ಇಲ್ಲವೆಂದು ಕೊರಗಬೇಡ
ಆತ್ಮತೃಪ್ತಿಯ ಕೆಲಸ ಮಾಡಿ ಪಡೆದುಕೋ ಅದನ್ನ..
ರೂಪ ಸೌಂದರ್ಯಕೆ ಮರುಳಾಗಿ ಚಿಂತಿಸಬೇಡ
ನಿನ್ನ ಅಂತರಾಳದಲ್ಲಿ ರೂಪಿಸಿಕೋ ಅದನ್ನ..
ಪರರ ಆಸ್ತಿ ಸಂಪತ್ತು ನೋಡಿ ನನಗಿಲ್ಲವೆನ್ನಬೇಡ
ನ್ಯಾಯಮಾರ್ಗದಲ್ಲಿ ನಡೆದು ಸಂಪಾದಿಸಿಕೋ ಅದನ್ನ..
ನೀನೇ ತಪ್ಪು ಮಾಡಿ ಪರರಿಗೆ ಕೈ ತೋರಿಸಬೇಡ
ಏಟು ತಿನ್ನುವ ಮುನ್ನ ಸರಿಪಡಿಸಿಕೋ ಅದನ್ನ..
ಅಧಿಕಾರಕ್ಕಾಗಿ ಎಂದಿಗೂ ಹಾತೊರೆಯಲೇಬೇಡ
ಕಾಲಬಲ ಬರುವ ಹಾಗೆ ಸೃಷ್ಟಿಸಿಕೋ ಅದನ್ನ..
**ಭಗವಾನ್ ಶ್ರೀಕೃಷ್ಣ**




PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 14-08-2026 to 20-08-2026 ಬೆಲೆ:10-00 ಸಂಪುಟ–1 ಸಂಚಿಕೆ–46 ಪುಟಗಳು–6






ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ
www.karavalitharangini.com
ಕರಾವಳಿ ತರಂಗಿಣಿ
ಮಂಗಳೂರು




ಕರಾವಳಿಯ ವಿಶಿಷ್ಟ ಸಂಸ್ಕೃತಿಯ ಪ್ರತೀಕವಾದ 'ಆಟಿ' ತಿಂಗಳ ಆಚರಣೆ ಅಥವಾ ಸಾಂಪ್ರದಾಯಿಕ ಹಬ್ಬಗಳ ಬಗ್ಗೆ ಹಿರಿಯರ ಜೊತೆಗೆ ಯುವ ಜನತೆ ಕೂಡ ಹೆಚ್ಚಿನ ಆಸಕ್ತಿ ತೋರುತ್ತಿರುವುದು ನಿಜಕ್ಕೂ ಪ್ರಶಂಸನೀಯ. ಆಧುನಿಕತೆಯ ಭರಾಟೆಯಲ್ಲಿ ಮರೆಯಾಗುತ್ತಿದ್ದ ಆಟಿ ಕಳೆ, ಹಬ್ಬ ಹರಿದಿನಗಳು, ನೇಜಿ ನೆಡುವುದು ಮತ್ತು ಸ್ಥಳೀಯ ಜಾನಪದ ಕಲೆಗಳನ್ನು ಯುವಕರು ಸಾಮಾಜಿಕ ಜಾಲತಾಣಗಳ ಮೂಲಕ ಹಾಗೂ ಸ್ವಯಂ ಭಾಗವಹಿಸುವಿಕೆಯ ಮೂಲಕ ಜೀವಂತವಾಗಿರಿಸುತ್ತಿದ್ದಾರೆ. ಹಿರಿಯರಿಂದ ಕಿರಿಯರಿಗೆ ಪರಂಪರೆಯು ಹಸ್ತಾಂತರಗೊಳ್ಳುತ್ತಿರುವುದು ನಮ್ಮ ಅನ್ವರ್ಥಕ ಸಂಸ್ಕೃತಿಯ ಉಳಿವಿಗೊಂದು ಸತ್ಸಂಕೇತ. ಈ ಮೂಲಕ ಮುಂದಿನ ಪೀಳಿಗೆಗೂ ನಮ್ಮ ಹಿರಿಯರ ಆರೋಗ್ಯಕರ ಜೀವನಶೈಲಿ ಮತ್ತು ಆಚರಣೆಗಳ ಮಹತ್ವ ತಲುಪುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

## ಪತ್ರಕರ್ತರ ಕನ್ನಡ ಭಾಷಾ ಬಳಕೆ ಅನುಕರಣೀಯ –ಪ್ರೊ. ಧರ್ಮ



**ಮಂಗಳೂರು:** ಕನ್ನಡ ಭಾಷಾ ಬೆಳವಣಿಯಲ್ಲಿ ಪತ್ರಕರ್ತರ ಕೊಡುಗೆ ಮಹತ್ವದ್ದಾಗಿದೆ, ಜಿಲ್ಲೆಯ ಪತ್ರಕರ್ತರ ಸಂಶೋಧನಾ ಪ್ರವೃತ್ತಿ ಪತ್ರಕರ್ತರ ವೃತ್ತಿಗೆ ಘನತೆಯನ್ನು ತಂದು ಕೊಟ್ಟಿದೆ ಎಂದು ಮಂಗಳೂರು ಮಂಗಳ ಗಂಗೋತ್ರಿ ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಪಿ.ಎಲ್. ಧರ್ಮ ತಿಳಿಸಿದ್ದಾರೆ. ಅವರು ನಗರದ ಪ್ರೆಸ್‌ಕ್ಲಬ್‌ನಲ್ಲಿ, ದ.ಕ. ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಮಂಗಳೂರು ಪ್ರೆಸ್‌ಕ್ಲಬ್, ಪತ್ರಿಕಾ **3ನೇ ಪುಟಕ್ಕೆ**

## ಗುಟ್ಕಾ ನಿಷೇಧದ ನಡುವೆ ಕೃಷಿಕರ ಬವಣೆ

**ಮಂಗಳೂರು:** ಕರ್ನಾಟಕ ಸರ್ಕಾರವು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ರಾಜ್ಯದಲ್ಲಿ ತಂಬಾಕು ಮತ್ತು ನಿಕೋಟಿನ್ ಯುಕ್ತ ಗುಟ್ಕಾ ಹಾಗೂ ಪಾನ್ ಮಸಾಲಾ ಉತ್ಪನ್ನಗಳ ಮೇಲೆ ಒಂದು ವರ್ಷದ ಅವಧಿಗೆ ಸಂಪೂರ್ಣ ನಿಷೇಧ ಹೇರಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಕ್ಯಾನ್ಸರ್ ನಂತಹ ಮಾರಕ ಕಾಯಿಲೆಗಳಿಗೆ ಕಾರಣವಾಗುವ ತಂಬಾಕು ಉತ್ಪನ್ನಗಳ ಮಾರಾಟ ಹಾಗೂ ಬಳಕೆಗೆ ಕಡಿವಾಣ ಹಾಕುವುದು ಯುವಜನರ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಅತ್ಯಂತ ಅವಶ್ಯಕವಾಗಿದೆ. ಈ ಕಠಿಣ ಕ್ರಮದಿಂದ ಸಮಾಜದಲ್ಲಿ **3ನೇ ಪುಟಕ್ಕೆ**



## ಗ್ಯಾರಂಟಿ ಯೋಜನೆಗಳ ವಾರಂಟಿ ಮುಗಿದಿದೆ –ಎಸ್‌ಡಿಪಿಐ

**ಮಂಗಳೂರು:** ಸಿದ್ದರಾಮಯ್ಯನವರ ಮೂರು ವರ್ಷಗಳ ಸಿಎಂ ಅವಧಿ ಮುಗಿದು ಡಿಕೆಶಿಯವರು ಮುಖ್ಯಮಂತ್ರಿ ಆಗುವಾಗ ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆಗಳ ವಾರಂಟಿ ಮುಗಿಸಿದೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮೈಸೂರು ವ್ಯಂಗ್ಯವಾಡಿದರು. ಮಂಗಳೂರಿನಲ್ಲಿ ಮಾತನಾಡಿದ ಅವರು, ಸದ್ಯ ಕಾಂಗ್ರೆಸ್ ಸರಕಾರ ಜನರನ್ನು ದಾಖಲೆಗಳ ಹೆಸರಿನಲ್ಲಿ ಸತಾಯಿಸುತ್ತಿದ್ದಾರೆ. ಗ್ಯಾರಂಟಿ ಯೋಜನೆ ಆರಂಭದಲ್ಲಿ ದಾಖಲೆಗಳಿಲ್ಲದೆ ಅರ್ಜಿ ಹಾಕಿಸಲಾಗಿತ್ತು. ಈಗ ಎಲ್ಲದಕ್ಕೂ ಪ್ಯಾನ್, **3ನೇ ಪುಟಕ್ಕೆ**











ಕರಾವಳಿ ತರಂಗಿಣಿ
ಕಲಾ ತರಂಗಿಣಿ



# ಮೈಸೂರಲ್ಲಿ 'ಜೋಡೆತ್ತು' ಚಿತ್ರದ ಅದ್ದೂರಿ ಕ್ಲೈಮ್ಯಾಕ್ಸ್

ಸೋಮಶೇಖರ್ ಕಟ್ಟಿಗೇನಹಳ್ಳಿ ನಿರ್ಮಾಣದ ಜೋಡೆತ್ತು ಚಿತ್ರ ಕ್ಲೈಮ್ಯಾಕ್ಸ್ ಹಂತ ತಲುಪಿದೆ. ಚಿಕ್ಕಣ್ಣ, ಸುನಿಲ್ (ತೆಲುಗು) ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿರುವ 'ಜೋಡೆತ್ತು' ಚಿತ್ರದ ಕ್ಲೈಮ್ಯಾಕ್ಸ್ ಭಾಗದ ಶೂಟಿಂಗ್ ಮೈಸೂರಿನ ಹೊರ ಭಾಗದ ಇಮ್ಮಾವು ಬಳಿ ಅದ್ದೂರಿಯಾಗಿ ನಡೆಯುತ್ತಿದೆ. ಅಲ್ಲಿ ಛಾಯಾಗ್ರಾಹಕ ಕಮ್ ನಿರ್ದೇಶಕ ಸುಧಾಕರ್ ಈ ರೋಮಾಂಚನಕಾರಿ ಎತ್ತಿನಗಾಡಿ ಚೇಸಿಂಗ್ ದೃಶ್ಯಗಳನ್ನು ಸೆರೆ ಹಿಡಿಯುತ್ತಿದ್ದರು. ಸುಮಾರು ಸಾವಿರಕ್ಕೂ ಹೆಚ್ಚು ಜೂನಿಯರ್ ಕಲಾವಿದರು ಮತ್ತು ನೂರಾರು ಎತ್ತಿನ ಗಾಡಿಗಳನ್ನು ಬಳಸಿ ಎತ್ತಿನಗಾಡಿ ಓಟದ ಸ್ಪರ್ಧೆಯನ್ನು ಅಲ್ಲಿ ಚಿತ್ರೀಕರಿಸಲಾಗುತ್ತಿತ್ತು. ಈ ರೇಸ್‌ನಲ್ಲಿ ಅದ್ಭುತ ಫೈಟ್ ಕೂಡ ಕಂಪೋಸ್ ಮಾಡಲಾಯಿತು. ಸಿನಿಮಾ ಬಗ್ಗೆ ಮಾಹಿತಿ ನೀಡಲು ಚಿತ್ರತಂಡ ಪತ್ರಕರ್ತರನ್ನು ಮೈಸೂರಿಗೆ ಆಹ್ವಾನಿಸಿತ್ತು. ಈ ವೇಳೆ ರೇಸ್‌ನಲ್ಲಿ ಗೆದ್ದ ನಂದಿ (ಚಿಕ್ಕಣ್ಣ)ಯನ್ನು ಹೆಗಲಮೇಲೆ ಹೊತ್ತು ಗ್ರಾಮಸ್ಥರೆಲ್ಲ ಸಂಭ್ರಮಿಸುತ್ತಿದ್ದರು. ವಿರಾಮದ ವೇಳೆ ನಡೆದ ಮಾಧ್ಯಮದ ಮುಂದೆ ಕಲಾವಿದರು, ತಂತ್ರಜ್ಞರು ಮಾಹಿತಿ ಹಂಚಿಕೊಂಡರು. ಚಿಕ್ಕಣ್ಣ ಮಾತನಾಡುತ್ತ 'ಕಳೆದ ಒಂದು ವಾರದಿಂದ ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣ ಮಾಡುತ್ತಿದ್ದೇವೆ. ಇದರೊಂದಿಗೆ ಟಾಕಿ ಪೋರ್ಷನ್ ಮುಕ್ತಾಯವಾಗಿದ್ದು, ಎರಡು ಹಾಡು ಮಾತ್ರ ಬಾಕಿಯಿದೆ. ಈ ರೇಸ್ ಗಾಗಿ ನಿರ್ಮಾಪಕರು ಸುತ್ತಮುತ್ತಲ ಊರುಗಳಿಂದ ಎತ್ತಿನ ಗಾಡಿಗಳನ್ನು ತರಿಸಿದ್ದರು. ಇನ್ನೆರಡು ಗೀತೆಗಳನ್ನು ಮುಂದಿನ ತಿಂಗಳು ಶೂಟ್ ಮಾಡುತ್ತೇವೆ' ಎಂದರು. ನಿರ್ದೇಶಕ ಸುಧಾಕರ್ ಮಾತನಾಡಿ, 'ನಮ್ಮ ಚಿತ್ರದ 95% ಶೂಟಿಂಗ್ ಮುಕ್ತಾಯವಾಗಿದೆ. ಸಾವಿರಕ್ಕೂ ಹೆಚ್ಚು ಜೂನಿಯರ್ ಕಲಾವಿದರನ್ನು ಬಳಸಿ ಕ್ಲೈಮ್ಯಾಕ್ಸ್ ಸೀನ್ ಮಾಡಿದ್ದೇವೆ. ಚಿತ್ರದ ಎಲ್ಲಾ ಕಲಾವಿದರು ಇದರಲ್ಲಿ ಭಾಗವಹಿಸಿದ್ದರು. ನಿರ್ಮಾಪಕರು ಯಾವುದಕ್ಕೂ ಕೊರತೆ ಮಾಡದೆ ಅದ್ದೂರಿಯಾಗಿ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಮೈಸೂರು, ಮಂಡ್ಯ, ಮದ್ದೂರು, ಚನ್ನಪಟ್ಟಣದಲ್ಲಿ ನೈಜವಾಗಿ ಶೂಟ್ ಮಾಡಲಾಗಿದೆ. ಎರಡು ಹಾಡುಗಳ ಚಿತ್ರೀಕರಣ ಮುಗಿದಿದ್ದು, ಇನ್ನೆರಡು ಬಾಕಿ ಸಾಂಗ್ ಬಾಕಿಯಿದೆ. ಗ್ರಾಮೀಣ ಸೊಗಡಿನ ಚಿತ್ರವಾಗಿದೆ ಎಂದರು.



# 'ಪಬ್ಬಾರ್' ಸಿನಿಮಾ ಚಿತ್ರೀಕರಣ ಪೂರ್ಣ

ಕನ್ನಡ ಚಿತ್ರರಂಗದಲ್ಲಿ ಭರವಸೆಯ ನಟನಾಗಿ ಗುರುತಿಸಿಕೊಂಡಿರುವ ಡಾ. ರಾಜ್‌ಕುಮಾರ್ ಮೊಮ್ಮಗ ಧೀರನ್ ರಾಮ್‌ಕುಮಾರ್ ಅಭಿನಯದ ಬಹುನಿರೀಕ್ಷಿತ 'ಪಬ್ಬಾರ್' ಸಿನಿಮಾದ ಚಿತ್ರೀಕರಣ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. 'ಶಾ ಖಾಹಾರಿ' ಚಿತ್ರದ ಮೂಲಕ ಪ್ರೇಕ್ಷಕರ ಮತ್ತು ವಿಮರ್ಶಕರ ಗಮನ ಸೆಳೆದಿದ್ದ ನಿರ್ದೇಶಕ ಸಂದೀಪ್ ಸುಂಕದ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದು, 'ಗೀತಾ ಪಿಕ್ಚರ್ಸ್' ಬ್ಯಾನರ್ ಅಡಿಯಲ್ಲಿ ಗೀತಾಶಿವರಾಜ್‌ಕುಮಾರ್ ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಬೆಂಗಳೂರು, ಮೈಸೂರು, ಮಡಿಕೇರಿಯ ರಮಣೀಯ ತಾಣಗಳು ಹಾಗೂ ಹಿಮಾಚಲ ಪ್ರದೇಶದ ಮನಮೋಹಕ ವಾತಾವರಣದಲ್ಲಿ ಈ ಚಿತ್ರದ ಪ್ರಮುಖ ಸನ್ನಿವೇಶಗಳನ್ನು ಸೆರೆಹಿಡಿಯಲಾಗಿದೆ. ಈ ಚಿತ್ರದಲ್ಲಿ ಧೀರನ್ ರಾಮ್‌ಕುಮಾರ್ ಹಿಂದೆಂದೂ ಕಾಣಿಸಿಕೊಂಡಿರದ ಖಡಕ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ನಟಿಸಿದ್ದು, ಅಭಿನಯದ ಹೊಸ ಮಗ್ಗುಲನ್ನು ಪ್ರೇಕ್ಷಕರಿಗೆ ಉಣಬಡಿಸಲು ಸಜ್ಜಾಗಿದ್ದಾರೆ. ನಾಯಕಿಯಾಗಿ 'ನೆನಪಿರಲಿ' ಪ್ರೇಮ್ ಅವರ ಪುತ್ರಿ ಅಮೃತಾ ಪ್ರೇಮ್ ಅಭಿನಯಿಸಿದ್ದು, ಧೀರನ್ ಹಾಗೂ ಅಮೃತಾ ಜೋಡಿ ತೆರೆಯ ಮೇಲೆ ಹೊಸ ಅಲೆ ಮೂಡಿಸುವ ನಿರೀಕ್ಷೆಯಿದೆ. ಇದರೊಂದಿಗೆ ಕೆ.ಜಿ.ಎಫ್ ಖ್ಯಾತಿಯ ಅಯ್ಯಪ್ಪ ಶರ್ಮ, ಅಚ್ಯುತ್ ಕುಮಾರ್ & ಗೋಪಾಲಕೃಷ್ಣ ದೇಶಪಾಂಡೆ ಅವರಂತಹ ಅನುಭವಿ ಕಲಾವಿದರು ಪ್ರಮುಖ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಹಿಮಾಚಲದ ಪಬ್ಬಾರ್ ಕಣಿವೆಯ ಹಿನ್ನೆಲೆಯಲ್ಲಿ ಸಾಗುವ ರೋಚಕ ಅಡ್ವೆಂಚರಸ್ ಕ್ರೈಮ್ ಥ್ರಿಲ್ಲರ್ ಕಥಾಹಂದರವನ್ನು ಹೊಂದಿರುವ ಈ ಚಿತ್ರಕ್ಕೆ ಮಯೂರ್ ಅಂಬೆಕಲ್ಲು ಅವರ ಸಂಗೀತ ಹಾಗೂ ವಿಶ್ವಜಿತ್ ರಾವ್ ಅವರ ಛಾಯಾಗ್ರಹಣ ಬಲ ತುಂಬಿದೆ.



# 'ಸ್ಲಮ್ ಡಾಗ್' ಚಿತ್ರದಲ್ಲಿ ಪವರ್‌ಫುಲ್ ಅಧಿಕಾರಿ 'ಗೌರಿ ಹೆಗ್ಡೆ' ಪಾತ್ರದಲ್ಲಿ ಟಬು!

ನಿರ್ದೇಶಕ ಪೂರಿ ಜಗನ್ನಾಥ್ ಮತ್ತು ನಟ ವಿಜಯ್ ಸೇತುಪತಿ ಪ್ರಥಮ ಬಾರಿಗೆ ಒಂದಾಗುತ್ತಿರುವ ಪ್ಯಾನ್-ಇಂಡಿಯಾ ಆಕ್ಷನ್ ಡ್ರಾಮಾ 'ಸ್ಲಮ್ ಡಾಗ್' 33 ಟೆಂಪಲ್ ರೋಡ್' ಸಿನಿಮಾವು ಭರ್ಜರಿ ಆಕ್ಷನ್ ಮತ್ತು ನಿಗೂಢತೆಯ ಮಿಶ್ರಣವನ್ನು ನೀಡುವ ಭರವಸೆ ಮೂಡಿಸಿದೆ. ಇತ್ತೀಚೆಗಷ್ಟೇ ಗೌರಿ ಹೆಗ್ಡೆ ಪಾತ್ರದಲ್ಲಿ ಟಬು ಅವರ ಫಸ್ಟ್‌ಲುಕ್ ಅನಾವರಣಗೊಳಿಸಿದ್ದ ಚಿತ್ರತಂಡ ಈಗ ಶಕ್ತಿಶಾಲಿ ಪಾತ್ರದ ಪರಿಚಯ ನೀಡುವ ಒಂದು ಪವರ್‌ಫುಲ್ ಗ್ಲಿಂಪ್ಸ್ ಬಿಡುಗಡೆ ಮಾಡಿದೆ. ನಗರದ ಕೊಳಚೆ ಪ್ರದೇಶಗಳ ಹಿನ್ನೆಲೆಯಲ್ಲಿ ಸಾಗುವ ಈ ಗ್ಲಿಂಪ್ಸ್, ಮೊದಲಿಗೆ ಸಿನಿಮಾದ ಕಚ್ಚಾ ಮತ್ತು ನೈಜ ಜಗತ್ತನ್ನು ಪರಿಚಯಿಸುತ್ತದೆ. ತದನಂತರ ಟಬುರವರ ಎಂಟ್ರಿಯನ್ನು ಅತ್ಯಂತ ಆಕರ್ಷಕವಾಗಿ ತೋರಿಸಲಾಗಿದೆ. ಕಾರಿನಲ್ಲಿ ಆಗಮಿಸುವ ಅವರು, ಸಿಗರೇಟ್ ಒಂದನ್ನು ಹಚ್ಚಿಕೊಂಡು ತಕ್ಷಣವೇ ಪರಿಸ್ಥಿತಿಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಾರೆ. ಸ್ಥಳೀಯ ಗೂಂಡಾಗೆ ನೀಡುವ ಖಡಕ್ ಎಚ್ಚರಿಕೆ ಮತ್ತು ಆನಂತರ ನೀಡುವ ಒಂದು ಕಪಾಳಮೋಕ್ಷ, ಗೌರಿ ಹೆಗ್ಡೆ ಅಧಿಕಾರವನ್ನು ಕೇಳಿ ಪಡೆಯುವವಳಲ್ಲ ಬದಲಾಗಿ ಅಧಿಕಾರವನ್ನು ತಾನೇ ಚಲಾಯಿಸುವ ಮಹಿಳೆ ಎಂದು ತೋರಿಸುತ್ತದೆ. ಈ ಪಾತ್ರವನ್ನು ಒಬ್ಬ ಶಕ್ತಿಶಾಲಿ ಅಧಿಕಾರಿಯಾಗಿ ಮಾತ್ರವಲ್ಲದೆ ಸಂಪೂರ್ಣವಾಗಿ ಭಯವಿಲ್ಲದ ಮತ್ತು ಯಾವುದೇ ರಾಜಿ ಮಾಡಿಕೊಳ್ಳದ ವ್ಯಕ್ತಿಯಾಗಿ ತೋರಿಸಲಾಗಿದೆ. ಗೌರಿ ಹೆಗ್ಡೆ ಬೀದಿಗಳ ಮಧ್ಯದಲ್ಲೇ ಗೂಂಡಾಗಳನ್ನು ಎದುರಿಸುತ್ತಾಳೆ. ಅವರೊಂದಿಗೆ ಕಾದಾಡುತ್ತಾ ಲಾಠಿ ಬೀಸಿ ಪರಿಸ್ಥಿತಿಯನ್ನು ಹತೋಟಿಗೆ ತರುತ್ತಾಳೆ. ಸುತ್ತಲೂ ಪೊಲೀಸರು ಮತ್ತು ಜನರ ಗುಂಪೇ ಇದ್ದರೂ ಅವಳು ಧೃತಿಗೆಡದೆ ತಮ್ಮ ಅಧಿಕಾರಕ್ಕೆ ಸವಾಲು ಹಾಕುವವರನ್ನು ಆಕ್ರಮಣಕಾರಿಯಾಗಿ ಹತೋಟಿಗೆ ತರುತ್ತಾಳೆ.



# ಕರ್ನಾಟಕದಲ್ಲಿ 'ವಿಶ್ವನಾಥ್ ಅಂಡ್ ಸನ್ಸ್' ವಿತರಣೆಯ ಹಕ್ಕು ಪಡೆದ ವಿಕೆ ಫಿಲ್ಮ್ಸ್

ಸೂರ್ಯ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ಚಿತ್ರವನ್ನು ಖ್ಯಾತ ನಿರ್ದೇಶಕ ವೆಂಕಿ ಅಟ್ಲೂರಿ ನಿರ್ದೇಶಿಸಿದ್ದಾರೆ. ಸಿತಾರ ಎಂಟರ್‌ಟೈನ್‌ಮೆಂಟ್ಸ್, ಫಾರ್ಚೂನ್ ಫೋರ್ ಸಿನಿಮಾಸ್ ಹಾಗೂ ಶ್ರೀಕರ ಸ್ಟುಡಿಯೋಸ್ ಸಂಸ್ಥೆಗಳ ನಿರ್ಮಾಣದಲ್ಲಿ ಮೂಡಿಬಂದಿರುವ ಈ ಚಿತ್ರವು ಆಗಸ್ಟ್ 14ರಂದು ವಿಶ್ವದಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ. ಚಿತ್ರದಲ್ಲಿ ಸೂರ್ಯ, ಮಮಿತಾ ಬೈಜು, ರಾಧಿಕಾ ಶರತ್‌ಕುಮಾರ್, ರವೀನಾ ಟಂಡನ್ ಸೇರಿದಂತೆ ಹಲವು ಪ್ರತಿಭಾವಂತ ಕಲಾವಿದರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಜಿ.ವಿ. ಪ್ರಕಾಶ್ ಕುಮಾರ್ ಸಂಗೀತ ನಿರ್ದೇಶನ, ನಿಮಿಷ್ ರವಿ ಛಾಯಾಗ್ರಹಣ ಹಾಗೂ ನವೀನ್ ನೂಲಿ ಸಂಕಲನ ಚಿತ್ರಕ್ಕಿದೆ. ಕುಟುಂಬದ ಭಾವನೆಗಳು, ಸಂಬಂಧಗಳ ಮಹತ್ವ ಮತ್ತು ತಲೆಮಾರುಗಳ ನಡುವಿನ ಬಾಂಧವ್ಯವನ್ನು ಮನಮುಟ್ಟುವ ರೀತಿಯಲ್ಲಿ ಹೇಳುವ ಈ ಚಿತ್ರವು ತನ್ನ ಶೀರ್ಷಿಕೆ, ಟೀಸರ್ ಹಾಗೂ ಹಾಡುಗಳ ಮೂಲಕ ಈಗಾಗಲೇ ಸಿನಿಪ್ರಿಯರ ಗಮನ ಸೆಳೆದಿದೆ. ಬಿಡುಗಡೆಗೂ ಮುನ್ನವೇ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆ ಮೂಡಿದೆ. ಇದೀಗ ವಿಕೆ ಫಿಲ್ಮ್ಸ್ ಮೂಲಕ ಕರ್ನಾಟಕದಾದ್ಯಂತ ಬಿಡುಗಡೆಯಾಗುತ್ತಿರುವ 'ವಿಶ್ವನಾಥ್ ಅಂಡ್ ಸನ್ಸ್', ರಾಜ್ಯದ ಪ್ರೇಕ್ಷಕರಿಗೆ ಈ ವರ್ಷದ ಅತ್ಯುತ್ತಮ ಕುಟುಂಬ ಮನರಂಜನಾ ಚಿತ್ರಗಳಲ್ಲಿ ಒಂದಾಗುವ ಭರವಸೆ ಮೂಡಿಸಿದೆ.



# ಬೆಂಗಳೂರಿನಲ್ಲಿ ರೋರಿಂಗ್ ಸ್ಟಾರ್ ಶ್ರೀಮುರಳಿ ಅಭಿನಯದ 'ಉಗ್ರಾಯುಧಮ್' ಚಿತ್ರಕ್ಕೆ ಬಿರುಸಿನ ಚಿತ್ರೀಕರಣ

'ನಿದ್ರಾದೇವಿ ನೆಕ್ಸ್ಟ್ ಡೋರ್' ಚಿತ್ರದ ಮೂಲಕ ನಿರ್ಮಾಪಕರಾಗಿ ಚಿತ್ರರಂಗ ಪ್ರವೇಶಿಸಿದ ಜಯರಾಮ್ ದೇವಸಮುದ್ರ ಅವರು ತಮ್ಮ ಸುರಮ್ ಮೂವೀಸ್ ಲಾಂಛನದಲ್ಲಿ 'ಎಲ್ ಎಸ್‌ಡಿ' ಹಾಗೂ 'ನೀ ನಂಗೆ ಅಲ್ಲವಾ' ಚಿತ್ರಗಳನ್ನು ನಿರ್ಮಿಸಿದ್ದಾರೆ. ಈ ಚಿತ್ರಗಳು ಸಹ ತೆರೆಗೆ ಬರಲು ಸಿದ್ದವಾಗಿದೆ. ಪ್ರಸ್ತುತ ಜಯರಾಮ್ ದೇವಸಮುದ್ರ ಅವರು, ತಮ್ಮ ಅಮೋಘ ಅಭಿನಯದ ಮೂಲಕ ಅಭಿಮಾನಿಗಳ ಮನ ಗೆದ್ದಿರುವ ರೋರಿಂಗ್ ಸ್ಟಾರ್ ಶ್ರೀಮುರಳಿ ನಾಯಕರಾಗಿ ನಟಿಸುತ್ತಿರುವ ಅದ್ದೂರಿ ತಾರಾಬಳಗದ, ಅಪಾರ ವೆಚ್ಚದ 'ಉಗ್ರಾಯುಧಮ್' ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಪುನೀತ್ ರುದ್ರನಾಗ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. 700 ವರ್ಷಗಳ ಹಿಂದಿನ ಪಿರಿಯಾಡಿಕ್ ಡ್ರಾಮ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಬೆಂಗಳೂರಿನ ರಾಕ್ಲೈನ್ ಸ್ಟುಡಿಯೋದಲ್ಲಿ ಬಿರುಸಿನ ಚಿತ್ರೀಕರಣ ನಡೆಯುತ್ತಿದೆ. ಕಲಾ ನಿರ್ದೇಶಕ ಅಮರ್ ಅದ್ದೂರಿ ಸೆಟ್ ನಿರ್ಮಾಣ ಮಾಡಿದ್ದಾರೆ.



# ಕ್ರಾಸಿಂಗ್ ಪಾತ್ಸ್ ಮಾನವ-ಆನೆ ಸಂಘರ್ಷದ ಕುರಿತಾದ ಸಾಕ್ಷ್ಯಚಿತ್ರ

'ವಿಶ್ವ ಆನೆಗಳ ದಿನ'ದಂದು ಅನಾವರಣಗೊಳ್ಳುತ್ತಿರುವ 'ಕ್ರಾಸಿಂಗ್ ಪಾತ್ಸ್' ಸಾಕ್ಷ್ಯಚಿತ್ರದ ಮೂಲಕ ನಟಿ ಸಂಯುಕ್ತಾ ಹೊರನಾಡು ಅವರು ಪ್ರಥಮ ಬಾರಿಗೆ ನಿರ್ದೇಶಕಿಯಾಗಿ ಬಡ್ತಿ ಪಡೆದುಕೊಂಡಿದ್ದಾರೆ. ಈ ಸಾಕ್ಷ್ಯಚಿತ್ರವು ತೀವ್ರಗೊಳ್ಳುತ್ತಿರುವ ಮಾನವ-ಆನೆ ಸಂಘರ್ಷದ ಕುರಿತು ಬೆಳಕು ಚೆಲ್ಲುತ್ತದೆ. ಈ ಸಾಕ್ಷ್ಯಚಿತ್ರಕ್ಕೆ ಟೆಕಿಯಾನ್ ಸಂಸ್ಥೆಯ ಸಿಎಸ್ ಆರ್ ಇನಿಶಿಯೇಟಿವ್ ಜೊತೆಗೆ ಕರ್ನಾಟಕ ಅರಣ್ಯ ಇಲಾಖೆ ಮತ್ತು ಆ ರೋಚಾ ಇಂಡಿಯಾ ಸಂಪಿಗೆ ಫಿಲ್ಮ್ಸ್ ಪ್ರೊಡಕ್ಷನ್ ಇದಕ್ಕೆ ಸಹಯೋಗ ನೀಡಿವೆ. ಕಾಡುಗಳು ಕಿರಿದಾಗುತ್ತಾ, ಮಾನವನ ಚಟುವಟಿಕೆಗಳಿಂದಾಗಿ ವನ್ಯಜೀವಿಗಳ ನೈಸರ್ಗಿಕ ಆವಾಸ ಸ್ಥಾನಗಳು ನಾಶವಾಗುತ್ತಿರುವ ಈ ಸಂದರ್ಭದಲ್ಲಿ ಆನೆಗಳು ಅನಿವಾರ್ಯವಾಗಿ ಮಾನವ ವಸತಿ ಪ್ರದೇಶಗಳಿಗೆ ಕಾಲಿಡುತ್ತಿವೆ. ಇದು ಸ್ಥಳೀಯ ಸಮುದಾಯಗಳು ಮತ್ತು ವನ್ಯಜೀವಿಗಳು ಇಬ್ಬರ ಮೇಲೆಯೂ ಗಂಭೀರ ಪರಿಣಾಮ ಬೀರುವ ಸಂಘರ್ಷಕ್ಕೆ ಕಾರಣವಾಗಿದೆ.



# 'ನಮ್ಮ ರಾಯರು' ಬೆಂಗಳೂರಿನಲ್ಲಿ ಚಿತ್ರೀಕರಣ ಆರಂಭ

ನಾಡಿನ ಶ್ರೇಷ್ಠ ಹರಿದಾಸರ ಜೀವನ ಚರಿತ್ರೆಯನ್ನು ಸಿನಿಮಾ ಮೂಲಕ ಜನರಿಗೆ ತಲುಪಿಸಿದವರು ಮಧುಸೂದನ್ ಹವಾಲ್ದಾರ್. ಅವರ ಮುಂದಿನ ನಿರ್ದೇಶನದ ಚಿತ್ರ 'ನಮ್ಮ ರಾಯರು'. ಪ್ರಸ್ತುತ ಈ ಚಿತ್ರದ ಚಿತ್ರೀಕರಣಕ್ಕೆ ಬೆಂಗಳೂರಿನಲ್ಲಿ ಚಾಲನೆ ದೊರಕಿದೆ. ನಮ್ಮ ಮಾತಾಂಬುಜ ಮೂವೀಸ್ ಮೂಲಕ ನಿರ್ಮಾಣವಾಗುತ್ತಿರುವ ಆರನೇ ಚಿತ್ರ 'ನಮ್ಮ ರಾಯರು'. ಈ ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಬರೆದು ಸಂಗೀತ ಸಂಯೋಜಿಸುವುದರ ಜೊತೆಗೆ ನಿರ್ಮಾಣ ಹಾಗೂ ನಿರ್ದೇಶನವನ್ನು ಮಾಡುತ್ತಿದ್ದೇನೆ. ಜೆ.ಎಂ. ಪ್ರಹ್ಲಾದ್ ಸಂಭಾಷಣೆ ಬರೆಯುತ್ತಿದ್ದಾರೆ. ಇತ್ತೀಚೆಗೆ ಬೆಂಗಳೂರಿನ ಭಾರತೀಯ ವಿದ್ಯಾ ಭವನದಲ್ಲಿ ಪುರಂದರದಾಸರ 'ತಂಬೂರಿ ಮೀಟಿದವ' ಹಾಡಿನ ಚಿತ್ರೀಕರಣದೊಂದಿಗೆ ಈ ಚಿತ್ರದ ಚಿತ್ರೀಕರಣಕ್ಕೆ ಚಾಲನೆ ನೀಡಲಾಗಿದೆ. ಖ್ಯಾತ ಗಾಯಕಿ ಸಂಗೀತ ಕಟ್ಟಿ ಕುಲಕರ್ಣಿ ಈ ಹಾಡನ್ನು ಹಾಡಿದ್ದಾರೆ. 'ನಮ್ಮ ರಾಯರು' ಈಗಿನ ಕಾಲಘಟ್ಟ ಹಾಗೂ ಶ್ರೀರಾಘವೇಂದ್ರ ಸ್ವಾಮಿಗಳ ಜೀವನದ ಕಾಲಘಟ್ಟ ಎರಡು ಕಾಲಘಟ್ಟದಲ್ಲಿ ನಡೆಯುವ ಕಥೆ.



# 'ನ್ಯಾಚುರಲ್ ಸ್ಟಾರ್' ನಾನಿ ಅಭಿನಯದ 'ದಿ ಪ್ಯಾರಡೈಸ್' ಟೀಸರ್ ರಿಲೀಸ್

'ನ್ಯಾಚುರಲ್ ಸ್ಟಾರ್' ನಾನಿ ಅಭಿನಯದ ಬಹುನಿರೀಕ್ಷಿತ ಪ್ಯಾನ್-ವರ್ಲ್ಡ್ ಸಿನಿಮಾ 'ದಿ ಪ್ಯಾರಡೈಸ್' ಮಾಸ್ ಹಾಗೂ ಸ್ಫೋಟಕ ಟೀಸರನ್ನು ಚಿತ್ರತಂಡ ಇತ್ತೀಚೆಗಷ್ಟೇ ಅನಾವರಣಗೊಳಿಸಿದೆ. 'ದಸರಾ' ಚಿತ್ರದ ಯಶಸ್ಸಿನ ನಂತರ ನಿರ್ದೇಶಕ ಶ್ರೀಕಾಂತ್ ಒಡೆಲ ಹಾಗೂ ನಾನಿ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಈ ಸಿನಿಮಾ, ಟೀಸರ್ ಮೂಲಕ ಪ್ರೇಕ್ಷಕರಲ್ಲಿ ತೀವ್ರ ಕೌತುಕವನ್ನು ಹೆಚ್ಚಿಸಿದೆ. ಎಸ್‌ಎಲ್‌ವಿ ಸಿನೆಮಾಸ್ ಬ್ಯಾನರ್ ಅಡಿಯಲ್ಲಿ ಸುಧಾಕರ್ ಚೆರುಕೂರಿ ಈ ಚಿತ್ರವನ್ನು ಅತ್ಯಂತ ಬೃಹತ್ ವೆಚ್ಚದಲ್ಲಿ ನಿರ್ಮಿಸುತ್ತಿದ್ದಾರೆ. ದೌರ್ಜನ್ಯದ ವಿರುದ್ಧ ಧ್ವನಿಯೆತ್ತುವ 'ಜಡಾಲ್' ಈ ಟೀಸರ್ ಪ್ರೇಕ್ಷಕರನ್ನು ಕತ್ತಲೆ, ದೌರ್ಜನ್ಯ ಮತ್ತು ಹಿಂಸೆಯಿಂದ ಕೂಡಿದ ಕಠೋರ ಜಗತ್ತಿಗೆ ಕರೆದೊಯ್ಯುತ್ತದೆ. ಈ ಶೋಷಿತರ ಪರವಾಗಿ ಮತ್ತು ಶಕ್ತಿಶಾಲಿಗಳ ಪಾಲಿನ ಸಿಂಹಸ್ವಪ್ನವಾಗಿ 'ಜಡಾಲ್' ಎಂಬ ಕ್ರಾಂತಿಕಾರಿ ಪಾತ್ರದಲ್ಲಿ ನಾನಿ ಕಾಣಿಸಿಕೊಂಡಿದ್ದಾರೆ. ಚಿತ್ರದ ದೃಶ್ಯ ಕಥನದಲ್ಲಿ ಕಾಣಿಸಿಕೊಳ್ಳುವ ಕಾಗೆಯ ಸಂಕೇತವು ತಲೆಮಾರುಗಳಿಂದ ಮೂಲೆಗುಂಪಾದ ಜನರ ಆಕ್ರೋಶವನ್ನು ಬಿಂಬಿಸುತ್ತದೆ.



# 'ಸೆಲೆಬ್ರಿಟಿ' ಚಿತ್ರದ ಮದರ್ ಸಾಂಗ್ ರಿಲೀಸ್

ಅಶ್ವಿನ್ ನಾಯಕನಾಗಿ ನಟಿಸುತ್ತಿರುವ 'ಸೆಲೆಬ್ರಿಟಿ' ಸಿನಿಮಾದ ತಾಯಿ-ಮಗನ ಬಾಂಧವ್ಯ ಸಾರುವ ವಿಶೇಷ ಗೀತೆಯೊಂದು ಇತ್ತೀಚೆಗೆ ಬಿಡುಗಡೆಯಾಗಿದೆ. ಕಿರಣ್ ವಿಶ್ವನಾಥ್ ನಿರ್ದೇಶನದ ಈ ಚಿತ್ರದ ಹೊಸ ಹಾಡಿನ ಅನಾವರಣ ಕಾರ್ಯಕ್ರಮದಲ್ಲಿ ನಟ ಅಶ್ವಿನ್ ಮತ್ತು ಹಿರಿಯ ನಟಿ ಸಂಗೀತಾ ಮಾಧವನ್ ಸಿನಿಮಾ ಹಾಗೂ ಹಾಡಿನ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ. ಈ ಹಾಡನ್ನು ನಟ, ಜೆಡಿಎಸ್ ನಾಯಕ ನಿಖಿಲ್ ಕುಮಾರಸ್ವಾಮಿ ಅವರು ಬಿಡುಗಡೆ ಮಾಡಿದ್ದಾರೆ. ಪ್ರತಿಯೊಬ್ಬರಿಗೂ ತಾಯಿಯ ನೆನಪು ತರುವ ಹಾಡು. ಹಾಡಿನ ಬಗ್ಗೆ ಮಾತನಾಡಿದ ನಟ ಅಶ್ವಿನ್, 'ಎಲ್ಲಾ ತಾಯಂದಿರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಪಡುವ ಕಷ್ಟ ಮತ್ತು ಬೆಂಬಲವೇ ಈ ಚಿತ್ರದ ಮುಖ್ಯ ಕಥಾವಸ್ತು. ಈ ಸಾಂಗ್ ಕೇಳಿದಾಗ ಪ್ರತಿಯೊಬ್ಬರಿಗೂ ತಮ್ಮ ತಾಯಿಯು ನೆನಪಾಗುತ್ತದೆ ಎಂದರು.



# ಸಂತೋಷ್ ಬಾಲರಾಜ್ 'ಬೆಂಟ್ಲಿ' ಟ್ರೇಲರ್ ರಿಲೀಸ್

'ಗಣಪ' ಮತ್ತು 'ಕರಿಯ-2' ಚಿತ್ರಗಳ ಮೂಲಕ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಗುರುತು ಮೂಡಿಸಿದ್ದ ನಟ ಸಂತೋಷ್ ಬಾಲರಾಜ್ ಅವರ ಪ್ರಥಮ ವರ್ಷದ ಪುಣ್ಯಸ್ಮರಣೆಯ (ಆಗಸ್ಟ್ 5) ಅಂಗವಾಗಿ, ಅವರು ನಟಿಸಿ, ನಿರ್ದೇಶಿಸಿದ್ದ 'ಬೆಂಟ್ಲಿ' ಸಿನಿಮಾದ ಅಧಿಕೃತ ಟ್ರೇಲರ್ ಬಿಡುಗಡೆಯಾಗಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ ಅಕಾಲಿಕ ಮರಣ ಹೊಂದಿದ್ದ ಸಂತೋಷ್ ಅವರ ಅಗಲಿಕೆ ಚಂದನವನಕ್ಕೆ ದೊಡ್ಡ ಆಘಾತವನ್ನುಂಟು ಮಾಡಿತ್ತು. ಸಿನಿ ಎಂಟರ್‌ಪ್ರೈಸಸ್ ಬ್ಯಾನರ್ ಅಡಿಯಲ್ಲಿ ಶ್ವೇತಾ ಬಾಲರಾಜು ಈ ಚಿತ್ರವನ್ನು ನಿರ್ಮಿಸಿದ್ದು, ಸಂತೋಷ್ ಬಾಲರಾಜು ಅವರೊಂದಿಗೆ ಸಿಮ್ರಾನ್ ನಾಟೇಕರ್, ಶ್ರುತಿ, ಚರಣ್‌ರಾಜ್, ರಾಜಾ ಬಲವಾಡಿ ಮುಂತಾದವರು ನಟಿಸಿದ್ದಾರೆ. ಸ್ನೇಹಿತನನ್ನು ನೆನೆದು ಭಾವುಕರಾದ 'ಲೂಸ್ ಮಾದ' ಯೋಗಿ ಈ ಚಿತ್ರಕ್ಕೆ ಹಿನ್ನೆಲೆ ಧ್ವನಿ ನೀಡಿರುವ ನಟ ಲೂಸ್ ಮಾದ ಯೋಗಿ ಮಾತನಾಡಿ ಈ ಕಾರ್ಯಕ್ರಮದಲ್ಲಿ ಖುಷಿ ಆಗ್ತಿದೆ ಅಂತಾನೂ ಹೇಳೋಕೆ ಆಗಲ್ಲ, ಬೇಜಾರಾಗ್ತಿದೆ ಅಂತಾನೂ ಹೇಳೋಕೆ ಆಗಲ್ಲ. ನಮ್ಮ ನಾಯಕ ನಟ ತೀರಿಕೊಂಡು ಒಂದು ವರ್ಷ ಆಯ್ತು ಅನ್ನುವುದು ನೆನಪಿನಲ್ಲಿ ಇರುವ ವಿಷಯ ಅಷ್ಟೇ ಎಂದರು.






# ಸಿನಿಲೋಕದ ಧ್ರುವತಾರೆ ಗೀತಪ್ರಿಯ(ಲಕ್ಷ್ಮಣ ರಾವ್ ಮೋಹಿತೆ)..



ರೈತನನ್ನು ಭಾರತದ ಭಾಗ್ಯವಂತನೆಂದು ಹಾಡಿ ಹೊಗಳುವ, ಕಟ್ಟ ಕ್ರಾಂತಿಗೀತೆ ಕೇಳಿದಿರಾದರೆ "ಗೀತಪ್ರಿಯ" ಎಂಬ ಅಪೂರ್ವ ಸಾಹಿತಿ, ಚಿತ್ರ ನಿರ್ದೇಶಕ ಪರಿಚಯ ಇರದೇ ಇರಲಾರರು. ಬೆಸುಗೆ ಎಂಬ ಪದ ಒಂದೇ ಹಾಡಿನಲ್ಲಿ ಎಷ್ಟು ಸಾರಿ ಬರುತ್ತೆ ಎಂದು ಕಲಾಪ್ರೇಮಿಗಳು ಲೆಕ್ಕಹಾಕುವಂತೆ ಮಾಡಿದ್ದಲ್ಲದೆ "ಬೆಸುಗೆ" ಚಿತ್ರಕ್ಕಾಗಿ ಬೆಸುಗೆ, ಬೆಸುಗೆ ಬೆಸುಗೆ, ಸಾಹಿತ್ಯ ಬರೆದು ಗೀತಪ್ರಿಯ ಇನ್ನಷ್ಟು ಚಿತ್ರರಂಗಕ್ಕೆ ಹತ್ತಿರವಾದರು. "ಬೆಸುಗೆ" ಚಿತ್ರಕ್ಕಾಗಿ ಯಾರ ಹೂವು ಯಾರ ಮುಡಿಗೋ, ಯಾರ ಒಲವು ಯಾರ ಕಡೆಗೋ ಎಂದು ತಿರಸ್ಕರಿಸಿದ ಪ್ರೇಮಿಯನ್ನು ಕುರಿತು ಭಗ್ನಪ್ರೇಮದ ಸಾಹಿತ್ಯ ಬರೆದರು. ಸಮಾಜದಲ್ಲಿರುವ ಸೋಮಾರಿಗಳಿಗೆಂದೆ ಭಗವಂತ ಕೈಕೊಟ್ಟ ದುಡಿಯೋಕ್ಕಂತ, ಅದನ್ಯಾಕೆ ಎತ್ತುವೆ ಹೊಡೋಯೊಕಂತ ಎಂಬ ಸಂದೇಶವಿರುವ ಹಾಡುಗಳನ್ನು ಬರೆದರು. "ಬೆಳುವಳದ ಮಡಿಲಲ್ಲಿ" ಚಿತ್ರಕ್ಕಾಗಿ ಬೆವರ ಹನಿ ಬಿದ್ದಾಗ ಒಂದೊಂದು ಹನಿಯು ಮುತ್ತಾಯ್ತದೋ ಎಂಬ ಕೃಷಿಕನಿಗೆ ಸ್ಪೂರ್ತಿ ತುಂಬುವ ಸಾಹಿತ್ಯ ಬರೆದರು. "ಹೊಂಬಿಸಿಲು" ಚಿತ್ರಕ್ಕಾಗಿ ಜೀವ ವೀಣೆ ನೀನು ಮಿಡಿತದ ಸಂಗೀತ, ಬಾವಗೀತೆ ಬಾಳಿನೊಲುಮೆಯ ಸಂಕೇತ ಎಂಬ ಗೀತೆಯನ್ನು ಬರೆದು ಪ್ರೇಮಿಗಳ ಹೃದಯ ಝುಳ್ಳೆನಿಸುವಂತೆ ಚಿತ್ರಿಸಿದ್ದರು. ನೀರಬಿಟ್ಟು ನೆಲದ ಮೇಲೆ ದೋಣಿ ಸಾಗದು ಎಂಬ ದಾಂಪತ್ಯ ತತ್ವವನ್ನು ಸಾರುವ ಗೀತೆಯನ್ನು ಬರೆದರು. ಹೀಗೆ ಹೇಳುತ್ತಾ ಬರೆಯುತ್ತಾ ಹೋದರೆ ಮುಗಿಯದಷ್ಟು ಸಾಹಿತ್ಯಗಳು ಗೀತಪ್ರಿಯರವರಿಂದ ರಚಿತವಾಗಿದೆ. ಇವರು 1955ರಲ್ಲಿ 'ಶ್ರೀರಾಮ ಪೂಜಾ" ಎಂಬ ಚಿತ್ರಕ್ಕೆ ಎರಡು ಹಾಡು ಬರೆಯುವುದರ ಮೂಲಕ ಚಿತ್ರರಂಗಕ್ಕೆ ಹೆಜ್ಜೆ ಇಟ್ಟವರು. "ಭಾಗ್ಯಚಕ್ರ" ಚಿತ್ರಕ್ಕೆ ಸ್ಕ್ರಿಪ್ಟ್ ಬರೆಯುವುದರೊಂದಿಗೆ ಗೀತಪ್ರಿಯ ಎಂಬುದಾಗಿ ಮರುನಾಮಕರಣಗೊಂಡು, ಒಂದರ ಹಿಂದೊಂದು ಮರೆಯಲಾಗದ ಅಮರಗೀತೆಗಳನ್ನು ಕಲಾಭಿಮಾನಿಗಳಿಗೆ ನೀಡಿ ಕಲಾಮಾತೆ ಪುತ್ರನೆನಿಸಿಕೊಂಡರು. ಪು. ತಿ. ನರಸಿಂಹಾಚರ್, ಬೆಳ್ಳಾವೆ ನರಸಿಂಹ ಶಾಸ್ತ್ರಿಗಳಿಂದ ಸ್ಪೂರ್ತಿಗೊಂಡಿದ್ದ ಗೀತಪ್ರಿಯರು ಅರ್ಥಪೂರ್ಣ ಸಾಹಿತ್ಯವನ್ನೇ ಬರೆದರು. ಶಿಸ್ತು, ಸಂಯಮ, ಸಮಯ ಪಾಲನೆಯಿಂದ ತಮ್ಮ ಕ್ರಿಯಾಶೀಲ ಚೌಕಟ್ಟನ್ನು ದಾಟದಂತೆ, ಅಚ್ಚುಕಟ್ಟಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿ, ನಿರ್ದೇಶಕರ, ಸಾಹಿತಿಗಳ ಸ್ಥಾನಮಾನ ಹೆಚ್ಚಿಸಿದಂತವರ ಸಾಲಿನಲ್ಲಿ ಗೀತಪ್ರಿಯ ಕೂಡ ಒಬ್ಬರು. ಇವರ ಮೂಲ ಹೆಸರು ಲಕ್ಷ್ಮಣರಾವ್ ಮೋಹಿತೆ. ರಾಮರಾವ್ ಮೋಹಿತೆ ಮತ್ತು ಲಕ್ಷ್ಮೀಬಾಯಿ ದಂಪತಿಗಳಿಗೆ 1932ರಲ್ಲಿ ಮಗನಾಗಿ ಜನಿಸಿದ ಲಕ್ಷ್ಮಣರಾವ್ ಅವರಿಗೆ ಸಂಗೀತ ನಿರ್ದೇಶಕ ವಿಜಯಭಾಸ್ಕರ್ ಸಹಕಾರದೊಂದಿಗೆ ಕಲಾಸೇವೆ ಮಾಡುವ ಅವಕಾಶ ಲಭಿಸಿತು. ಸುಮಾರು ಇನ್ನೂರ ಐವತ್ತಕ್ಕೂ ಹೆಚ್ಚು ಗೀತೆಗಳನ್ನು ರಚಿಸಿ, ನಲವತ್ತು ಚಿತ್ರಗಳನ್ನು ನಿರ್ದೇಶಿಸಿರುವ ಗೀತಪ್ರಿಯ 2016ರಲ್ಲಿ ವಿಧಿವಶರಾದರು. ಇವರು ಸಾಹಿತ್ಯ ಬರೆಯುತ್ತಿದ್ದ ಸಂದರ್ಭದಲ್ಲಿ ಡಾ.ರಾಜ್ ಕುಮಾರ್ ಅವರಿಗೆ ಕಥೆ ಹೇಳಿ, ನಿರ್ಮಾಪಕ ವೆಂಕಟಾಚಲರವರಿಗೂ ಕಥೆ ಹೇಳಿ ಒಪ್ಪಿಸಿ, ಹಳ್ಳಿಯಲ್ಲಿರುವ ನಾಯಕ ಬಹಿಷ್ಕಾರಗೊಂಡು ಮತ್ತೊಂದೂರಿಗೆ ಬಂದು ಬಂಜರು ಭೂಮಿಯಲ್ಲಿ ಬಾವಿ ತೆಗೆದು, ವ್ಯವಸಾಯ ಮಾಡುವ ಛಲವಾದಿ ಯುವಕನ ಕಥೆಯನ್ನಾದಾರಿಸಿದ "ಮಣ್ಣಿನ ಮಗ" ಎಂಬ ಚಿತ್ರವನ್ನು ನಿರ್ದೇಶಿಸಿದರು. ಬರೆಯದ ಕೈಗಳು ಬರೆಯುತ್ತಿದೆ, ಇದೇನು ಸಭ್ಯತೆ, ಇದೇನು ಸಂಸ್ಕೃತಿ ಎಂಬ ಹಾಡುಗಳನ್ನು ಬರೆದು ಚಿತ್ರಕ್ಕೆ ಮೆರುಗು ಕೊಟ್ಟರು. ಗೀತಪ್ರಿಯರು ಸಾಹಿತ್ಯ ಬರೆಯುವ ಸಂದರ್ಭದಲ್ಲಿ ಅವರ ಗೀತೆಗಳಿಂದ ಸಮ್ಮೋಹನಗೊಂಡ ಎಂ ಪಿ ಶಂಕರ್ ನಾನು ನಿರ್ಮಾಪಕನಾಗಿ ಮೊದಲು ಮಾಡುವ ಚಿತ್ರವೇ ನಿನ್ನ ನಿರ್ದೇಶನದಲ್ಲಿ ಎಂದು ಗೀತಪ್ರಿಯರಿಗೆ ಮುಂಗಡ ಹಣ ಕೊಟ್ಟಿದ್ದರು. ಆದರೆ ಕಾರಣಾಂತರಗಳಿಂದ ಅದು ಗೀತಪ್ರಿಯರಿಗೆ ಎರಡನೇ ಚಿತ್ರವಾಯ್ತು. 1969ರಲ್ಲಿ ತೆರೆಕಂಡ "ಕಾಡಿನ ರಹಸ್ಯ" ಚಿತ್ರವೇ ಅದು. ಸಾಮಾನ್ಯ ಯುವಕನೊಬ್ಬ ತಾನು ಅತ್ಯಂತ ಪ್ರೀತಿಯಿಂದ ಸಾಕಿದ ನಾಯಿಯನ್ನು ಸಾಲಕ್ಕಾಗಿ ಸಾಹುಕಾರರ ಮನೆಯಲ್ಲಿ ಒತ್ತೆಯಿಟ್ಟಾಗ, ಆ ನಾಯಿ ಸಾಹುಕಾರನ ಕುಟುಂಬದ ಪ್ರಾಣ ಉಳಿಸಿ, ಸಾಹುಕಾರನ ಮನ ಪರಿವರ್ತನೆಗೊಳಿಸುವಂತಹ ಅಪರೂಪದ ಕಥೆಯಿರುವ "ಜೋಡಿ ಜೀವ" ಎಂಬ ಚಿತ್ರವನ್ನು ನಿರ್ದೇಶಿಸಿ ಹೆಗ್ಗಳಿಕೆಗೆ ಪಾತ್ರವಾದರು. "ಪುಟಾಣಿ ಏಜೆಂಟ್ 123" ಎಂಬ ಮಕ್ಕಳ ಚಿತ್ರವನ್ನು ನಿರ್ದೇಶಿಸಿ ಗೆದ್ದರು. "ಯಾವ ಜನ್ಮದ ಮೈತ್ರಿ" 'ಸುವರ್ಣ ಸೇತುವೆ" "ಮೌನಗೀತೆ" ಬಾಳೊಂದು ಬಾವ ಗೀತೆ" ಹೀಗೆ ಯಶಸ್ವಿ ಚಿತ್ರಗಳನ್ನು ನೀಡಿದರು.






"ಮಣ್ಣಿನ ಮಗ" ಚಿತ್ರಕ್ಕಾಗಿ ರಾಷ್ಟ್ರ ಪ್ರಶಸ್ತಿ ಪಡೆದಿರುವ ಗೀತಪ್ರಿಯರಿಗೆ ಚಿತ್ರರಂಗದ ಸೇವೆಗಾಗಿ "ಪುಟ್ಟಣ್ಣ ಕಣಗಾಲ್' ಪ್ರಶಸ್ತಿಯನ್ನು ಕರ್ನಾಟಕ ಸರಕಾರ ನೀಡಿ ಗೌರವಿಸಿತು. ಅಲ್ಲದೆ ಇನ್ನಿತರ ಬೇರೆ ಬೇರೆ ಪ್ರಶಸ್ತಿಗಳನ್ನು ಬಾಚಿಕೊಂಡ ಗೀತಪ್ರಿಯರು, ಅರ್ಥಪೂರ್ಣ ಸಾಹಿತ್ಯದೊಂದಿಗೆ ಪ್ರತಿ ಚಿತ್ರವನ್ನು ಕಾವ್ಯದಂತೆ ಚಿತ್ರಿಸುತ್ತಿದ್ದರು. ಕನ್ನಡ ಚಿತ್ರರಂಗದಲ್ಲಿ ಶಿಸ್ತಿನ ಸಿಪಾಯಿಯಂತಿದ್ದ ಬರಹಗಾರ ಮತ್ತು ಚಲನಚಿತ್ರ ನಿರ್ದೇಶಕರಾದ ಗೀತಪ್ರಿಯರು ಕಲಾಪ್ರೇಮಿಗಳ ಹೃದಯಾಂತರಾಳದಲ್ಲಿ ಮಾತ್ರವಲ್ಲದೆ ಕರಾವಳಿ ತರಂಗಿಣಿ ಪತ್ರಿಕೆಯ ಈ ವಾರದ ಸಿನಿಲೋಕದ ಧ್ರುವತಾರೆಯಾಗಿದ್ದಾರೆ.








ಎನ್ನಾರ್ ಕೆ ವಿಶ್ವನಾಥ್
ENNAR K VISHWANATH







KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021